# ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು–560 056


ಸಂಖ್ಯೆ. ಎಸಿಎ–2/ವಿ.ವಿ.ಪ.ಸಾ ಸಭೆ/2018–19

ದಿನಾಂಕ: 19/10/2019

ಗೆ.

ವಿದ್ಯಾವಿಷಯಕ ಪರಿಷತ್ತಿನ ಎಲ್ಲಾ ಸದಸ್ಯರುಗಳಿಗೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು–56.

ವಿಷಯ: ದಿನಾಂಕ: 04/10/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು ಕಳುಹಿಸಿಕೊಡುವ ಕುರಿತು.

*****

ದಿನಾಂಕ: 04/10/2019ರಂದು ಬೆಳಿಗ್ಗೆ 11.30 ಘಂಟೆಗೆ ಜ್ಞಾನಭಾರತಿ ಆವರಣದ ಸನೆಟ್ ಸಭಾಂಗಣದಲ್ಲಿ ನಡೆದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಯನ್ನು, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮ 4.19ರ ಅಡಿಯಲ್ಲಿ ಈ ಪತ್ರದ ಜೊತೆ ಲಗತ್ತಿಸಿ ಕಳುಹಿಸಿ ಕೊಡಲಾಗಿದೆ.

ಈ ನಡಾವಳಿಗಳು ತಲುಪಿದ ಹದಿನಾಲ್ಕು ದಿವಸಗಳೊಳಗೆ ತಮ್ಮಿಂದ ಯಾವುದೇ ಆಕ್ಷೇಪಗಳು ಬಾರದಿದ್ದಲ್ಲಿ ಸದರಿ ನಡಾವಳಿಗಳಿಗೆ ವಿಶ್ವವಿದ್ಯಾಲಯದ ಪರಿನಿಯಮದಂತೆ ತಮ್ಮ ಸಮ್ಮತಿ ಇರುತ್ತದೆಂದು ಭಾವಿಸಲಾಗುತ್ತದೆ.

ತಮ್ಮ ವಿಶ್ವಾಸಿ,

ಕುಲಸಚಿವರು.

21/10/2019

ಪ್ರತಿಗಳು:

1. ಪ್ರಧಾನ ಕಾರ್ಯದರ್ಶಿಯವರು, ರಾಜ್ಯಪಾಲರಕಾರ್ಯಾಲಯ, ರಾಜಭವನ, ಬೆಂಗಳೂರು – 01.
2. ಪ್ರಧಾನ ಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 01.
3. ಕುಲಸಚಿವರು (ಮೌಲ್ಯಮಾಪನ)/ವಿತ್ತಾಧಿಕಾರಿಗಳು/ಉಪಕುಲಸಚಿವರು/ಸಹಾಯಕ ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
4. ಕುಲಪತಿಯವರು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಯವರು – ಇವರುಗಳ ಆಪ್ತ ಕಾರ್ಯದರ್ಶಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸಿಎ–2/ಎ2/ವಿ.ವಿ.ಪ./ಸಾ.ಸ/2019–20 ದಿನಾಂಕ: 19–10–2019

ದಿನಾಂಕ: 04–10–2019ರಂದು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದ ಆಡಳಿತ ವಿಭಾಗದ ಸನೆಟ್ ಸಭಾಂಗಣದಲ್ಲಿ ಬೆಳಿಗ್ಗೆ 11.30 ಘಂಟೆಗೆ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಸಾಮಾನ್ಯ ಸಭೆಯ ನಡಾವಳಿಗಳು:

<u>ಹಾಜರಿದ್ದ ಸದಸ್ಯರು:</u>

| | | |
|---|---|---|
| 1. | ಪ್ರೊ. ವೇಣುಗೋಪಾಲ್. ಕೆ.ಆರ್., ಕುಲಪತಿಗಳು | ಅಧ್ಯಕ್ಷರು |
| 2. | ಡಾ. ಎಂ.ಜಿ. ಕೃಷ್ಣಮೂರ್ತಿ, ಪ್ರಾಂಶುಪಾಲರು | ಸದಸ್ಯರು |
| 3. | ಡಾ. ಅನುರಾಧ. ಎಂ, ಪ್ರಾಂಶುಪಾಲರು | ಸದಸ್ಯರು |
| 4. | ಶ್ರೀ ಜಿ.ಆರ್. ಸುಧಾಕರ, ಪ್ರಾಂಶುಪಾಲರು | ಸದಸ್ಯರು |
| 5. | ಶ್ರೀ ದೇವೇಂದ್ರ ಕುಮಾರ ಪಾಠಕ್, ಪ್ರಾಂಶುಪಾಲರು | ಸದಸ್ಯರು |
| 6. | ಶ್ರೀ ಹೆಚ್. ಆರ್. ಕುಮಾರಸ್ವಾಮಿ, ಪ್ರಾಂಶುಪಾಲರು | ಸದಸ್ಯರು |
| 7. | ಶ್ರೀ ಜಯರಾಮ, ಪ್ರಾಂಶುಪಾಲರು | ಸದಸ್ಯರು |
| 8. | ಡಾ. ಸುಧಾಮಣಿ, ಪ್ರಾಂಶುಪಾಲರು | ಸದಸ್ಯರು |
| 9. | ಶ್ರೀ ಬಿ.ಆರ್. ಮಂಜುನಾಥ, ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ. ಟಿ.ಎಂ. ಶಿವಶಂಕರ್, | ಸದಸ್ಯರು |
| 11. | ಡಾ. ಪಿ. ವಿಷ್ಣುಕಾಮತ್, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | ಸದಸ್ಯರು |
| 12. | ಡಾ. ಮೊಹಮ್ಮದ್ ಅಫ್ಜಲ್ ಪಾಷ, ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ | ಸದಸ್ಯರು |
| 13. | ಡಾ. ಎಲ್. ಗೋಮತಿದೇವಿ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ | ಸದಸ್ಯರು |
| 14. | ಡಾ. ಸುದೇಶ್. ವಿ, ಡೀನರು, ಕಾನೂನು ನಿಕಾಯ | ಸದಸ್ಯರು |
| 15. | ಡಾ. ವೈ. ನಾಗರಾಜು, ಡೀನರು, ವಾಣಿಜ್ಯ ನಿಕಾಯ, | ಸದಸ್ಯರು |
| 16. | ಡಾ. ಹಶೀನ್ ತಾಜ್, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 17. | ಶ್ರೀ ಮಧುಚಂದ್ರ. ಜಿ. | ಸದಸ್ಯರು |
| 18. | ಗ್ರಂಥಪಾಲಕರು, ಬೆಂ.ವಿ.ಬೆಂ. | ಸದಸ್ಯರು |
| 19. | ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ, ಬೆಂ.ವಿ.ಬೆಂ. | ಸದಸ್ಯರು |
| 20. | ನಿರ್ದೇಶಕರು, ಪಿ.ಎಮ್.ಇ.ಬಿ, ಬೆಂ.ವಿ.ಬೆಂ. | ಸದಸ್ಯರು |
| 21. | ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಬೆಂ.ವಿ.ಬೆಂ. | ಸದಸ್ಯರು |
| 22. | ನಿರ್ದೇಶಕರು, ದೈಹಿಕ ಶಿಕ್ಷಣ ನಿರ್ದೇಶನಾಲಯ | ಸದಸ್ಯರು |

| | | |
|---|---|---|
| 23 | ಡಾ. ಶಿವರಾಜು. ಸಿ, ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 24 | ಶ್ರೀಮತಿ ಹೆಚ್.ಪಿ. ಪಾರ್ವತಿ, ವಿತ್ತಾಧಿಕಾರಿಗಳು | ಸದಸ್ಯರು |
| 25 | ಡಾ. ಬಿ.ಕೆ. ರವಿ, ಕುಲಸಚಿವರು | ಸದಸ್ಯ ಕಾರ್ಯದರ್ಶಿ |

ಮೊದಲಿಗೆ ಕುಲಸಚಿವರು ಮಾತನಾಡಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಕೋರಿದರು. ಹಾಗೂ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಡಾ. ಹಶೀನ್ ತಾಜ್, ಡೀನರು, ಶಿಕ್ಷಣ ವಿಭಾಗ ಹಾಗೂ ಈಗಾಗಲೇ ಹಿರಿಯ ಪ್ರಾಧ್ಯಾಪಕರಾಗಿ ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾಗಿದ್ದು, ಕಲಾ ನಿಕಾಯದ ಡೀನರಾಗಿ ನಾಮನಿರ್ದೇಶನಗೊಂಡ ಡಾ. ಬಿ. ಚಿಕ್ಕಮೇಲೂರಪ್ಪ, ಬೆಂಗಳೂರು ವಿಶ್ವವಿದ್ಯಾಲಯ ಇವರುಗಳಿಗೆ ಹಾರ್ದಿಕ ಸ್ವಾಗತವನ್ನು ಕೋರಿ ಅಭಿನಂದಿಸಿದರು. ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಗೆ ಸೇವೆ ಸಲ್ಲಿಸಿ ನಿರ್ಗಮಿಸಿದಂತಹ ಡಾ. ಎಮ್. ಜೆ. ವಿನೋದ್, ಡೀನರು, ಕಲಾ ನಿಕಾಯ ಹಾಗೂ ಡಾ. ಉಮ್ಮೆಕುಲ್ಸುಂ, ಡೀನರು, ಶಿಕ್ಷಣ ನಿಕಾಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇವರುಗಳು ವಿದ್ಯಾವಿಷಯಕ ಪರಿಷತ್ತಿನ ಕಾರ್ಯ-ಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿಶ್ವವಿದ್ಯಾಲಯದ ಬೆಳವಣಿಗೆಗೆ ಒಳ್ಳೆಯ ಸಲಹೆ ಸೂಚನೆಗಳನ್ನು ನೀಡಿ ಸಹಕರಿಸಿದ್ದಾರೆಂದು ತಿಳಿಸಿ, ಅವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು. ನಂತರ ಸಭೆಯ ಕಾರ್ಯ-ಕಲಾಪಗಳನ್ನು ನಡೆಸಿಕೊಡಲು ಮಾನ್ಯ ಕುಲಪತಿಗಳನ್ನು ಕೋರಿದರು.

ಕುಲಪತಿಗಳು ಮಾತನಾಡಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ, ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಂಡರು.

ವಿಷಯ ಸೂಚಿ: 1: ದಿನಾಂಕ: 23/07/2019ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ದಿನಾಂಕ: 23/07/2019 ರಂದು ನಡೆದ ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಯ ನಡಾವಳಿಗಳನ್ನು ಸಭೆಯು ಸ್ಥಿರೀಕರಿಸಿತು.

ವಿಷಯ ಸೂಚಿ: 2: To consider M.Sc. (Engg.) by research of VTU Degree for admission to Ph.D. programme in Bangalore University.

ಮಾನ್ಯ ಕುಲಪತಿಗಳು ಮಾತನಾಡಿ, M.Sc. (Engg.) ಪದವಿಯು ಸಂಶೋಧನೆ ಮೂಲಕ ಪಡೆಯುವ ಸ್ನಾತಕೋತ್ತರ ಪದವಿಯಾಗಿರುವುದರಿಂದ ಅಂತಹ ಪದವಿ ಪಡೆದ ವಿದ್ಯಾರ್ಥಿಗಳಿಗೆ Ph.D. ಅಧ್ಯಯನ ಮಾಡಲು ಅವಕಾಶವನ್ನು ನೀಡಬಹುದು ಎಂದು ತಿಳಿಸಿದರು.

ನಿರ್ಣಯ: ಚರ್ಚೆಯ ನಂತರ ಸಂಶೋಧನೆಯ ಮುಖಾಂತರ ಪಡೆದ M.Sc. (Engg.) ಪದವಿಯನ್ನು ಸ್ನಾತಕೋತ್ತರ ಪದವಿಗೆ ಸಮಾನ ಎಂದು ಪರಿಗಣಿಸಿ ಪಿ.ಹೆಚ್.ಡಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲು ಅನುಮೋದಿಸಲಾಯಿತು.

ವಿಷಯ ಸೂಚಿ: 3: 2018-19ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಪರಿಗಣಿಸುವುದರ ಕುರಿತು.

ಡಾ. ಪಿ. ವಿಷ್ಣುಕಾಮತ್, ಪ್ರಾಧ್ಯಾಪಕರು, ಮಾತನಾಡಿ, ವಿಶ್ವವಿದ್ಯಾಲಯದ ಶೈಕ್ಷಣಿಕ ಚಟುವಟಿಕೆಗಳ ವಿವರಗಳನ್ನು ಕ್ರೋಢೀಕರಿಸಿ, ವಿಶ್ವವಿದ್ಯಾಲಯದಲ್ಲಿ ಮಾಡಿದ ಸಾಧನೆ, ಸಾಧಿಸಿದ ಗುರಿ ಇವುಗಳೆಲ್ಲವುಗಳ ವಾರ್ಷಿಕ ವಿವರವನ್ನು ದಾಖಲಿಸಿ, ವಾರ್ಷಿಕ ವರದಿಯನ್ನು ಸಿದ್ಧಪಡಿಸಿರುತ್ತಾರೆ, ಆದರೆ ಪ್ರಾಧ್ಯಾಪಕರುಗಳು ಪ್ರಕಟಿಸುವ ಲೇಖನಗಳು, ಅವುಗಳನ್ನು ಬರೆದವರ ಮತ್ತು ಸಹಕರಿಸಿದವರ ಹೆಸರುಗಳನ್ನು ವಾರ್ಷಿಕ ವರದಿಯಲ್ಲಿ ನಮೂದಿಸುವಂತೆ ತಿಳಿಸಿದರು. ಕುಲಪತಿಯವರು ಮಾತನಾಡಿ, ಡಾ. ಕಾಮತ್ ಅವರ ಸಲಹೆಯನ್ನು ಸ್ವಾಗತಿಸುತ್ತಾ ಮುಂದಿನ ವರ್ಷದಿಂದ ತಯಾರಿಸುವ ವಾರ್ಷಿಕ ವರದಿಗಳಲ್ಲಿ ಶಿಕ್ಷಕರು ಬರೆದ ಲೇಖನಗಳನ್ನು ಬರೆದವರ ಹಾಗೂ ಸಹಕರಿಸಿದವರ ಹೆಸರುಗಳನ್ನು ಪ್ರಕಟಿಸುವುದಾಗಿ ಸಭೆಗೆ ತಿಳಿಸಿದರು.

ಡಾ. ಸುಧಾಮಣಿಯವರು ಮಾತನಾಡಿ ವಾರ್ಷಿಕ ವರದಿಯಲ್ಲಿ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದು ಸಮಾಜದಲ್ಲಿ ಉತ್ತುಂಗಕ್ಕೇರಿರುವ ಹಳೆಯ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಕಟಿಸುವಂತೆ ಸಲಹೆ ನೀಡಿದರು. ಕುಲಪತಿಯವರು ಅವರ ಸಲಹೆಯನ್ನು ಸ್ವಾಗತಿಸಿ ಅಂತಹ ಮಹನೀಯರ ಹೆಸರುಗಳನ್ನು ಮುನ್ನುಡಿಯಲ್ಲಿ ಪ್ರಕಟಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ನಿರ್ಣಯ: ಚರ್ಚೆಯ ನಂತರ ವಿದ್ಯಾವಿಷಯಕ ಪರಿಷತ್ತಿನ ಸಭೆಯು 2018-19ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸೂಚಿ: 4: 2019-2020ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಸಂಯೋಜನಾ ನವೀಕರಣ/ಶಾಶ್ವತ ಸಂಯೋಜನಾ ನವೀಕರಣ ನಿಮಿತ್ತ ನೇಮಕ ಮಾಡಿದ ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರು ಸಲ್ಲಿಸಿದ ವರದಿಗಳನ್ನು ಪರಿಗಣಿಸುವ ಬಗೆಗೆ.

ನಿರ್ಣಯ:

ಸುದೀರ್ಘಚರ್ಚೆಯ ನಂತರ, 2019–20ನೆ ಶೈಕ್ಷಣಿಕ ಸಾಲಿಗೆ, ಪ್ರೊ. ಉಮ್ಮೆಕುಲ್ಸುಂ, ಡೀನರು ಶಿಕ್ಷಣ ನಿಕಾಯ, ಇವರ ಅಧ್ಯಕ್ಷತೆಯಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯು ಈ ಕೆಳಕಂಡ ಕಾಲೇಜುಗಳ ಬಗ್ಗೆ ಸಲ್ಲಿಸಿರುವ ವರದಿಗಳನ್ನು ವಿದ್ಯಾವಿಷಯಕ ಪರಿಷತ್ತು ಪರಿಗಣಿಸಿ ಅನುಮೋದಿಸಿತು:

| ಕ್ರ.ಸಂ. | ಕಾಲೇಜು | ಶಿಫಾರಸ್ಸು (ಶೇಕಡವಾರು ಅಂಕಗಳು) |
|---|---|---|
| 1. | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು. | ಅಸ್ತಿತ್ವದಲ್ಲಿರುವ ಬಿ.ಎ., ಬಿ.ಎಸ್ಸಿ, ಬಿ.ಕಾಂ. ಕೋರ್ಸುಗಳ ಶಾಶ್ವತ ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ (72.46) |
| 2. | ಶ್ರೀನಿಧಿ ಕಾಲೇಜ್ ಆಫ್ ಎಜುಕೇಷನ್ ಫಾರ್ ವುಮೆನ್, ಹೊಮ್ಮದೇವನಹಳ್ಳಿ, ಬೆಂಗಳೂರು. | ಅಸ್ತಿತ್ವದಲ್ಲಿರುವ ಬಿ.ಇಡಿ. –50 ಕೋರ್ಸಿನ ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ. (45.68) |
| 3. | ಶುತ್ತರಿಯಾ ಕಾಲೇಜ್ ಆಫ್ ಎಜುಕೇಷನ್, ನಿಜಗಲ್, ನೆಲಮಂಗಲ, ಬೆಂಗಳೂರು ಗ್ರಾಮಾಂತರಜಿಲ್ಲೆ | ಅಸ್ತಿತ್ವದಲ್ಲಿರುವ ಬಿ.ಇಡಿ. –100 ಕೋರ್ಸಿನ ಸಂಯೋಜನಾ ನವೀಕರಣಕ್ಕೆ ಶಿಫಾರಸ್ಸು ಮಾಡಲಾಗಿದೆ. (49.93) |

ವಿಷಯ ಸೂಚಿ: 5: ಪಿ.ಇ.ಎಸ್. ಕಾಲೇಜು (ಸೌತ್ ಕ್ಯಾಂಪಸ್), ಬೆಂಗಳೂರು ಇಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳನ್ನು ಸ್ವಯಂ ಮುಚ್ಚುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ಪಿ.ಇ.ಎಸ್. ಕಾಲೇಜು (ಸೌತ್ ಕ್ಯಾಂಪಸ್), ಬೆಂಗಳೂರು ಇಲ್ಲಿ ಅಸ್ತಿತ್ವದಲ್ಲಿರುವ ಕೋರ್ಸುಗಳನ್ನು ಸ್ವಯಂ ಮುಚ್ಚಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸೂಚಿ: 6: ಪಿ.ಹೆಚ್.ಡಿ ನೊಂದಣಿ 2019–20ರ ಸಾಲಿನ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಗೆ ನಡೆಸಲು ಕೆ–ಸೆಟ್ ಮತ್ತು ಗೇಟ್ ಪಠ್ಯಕ್ರಮವನ್ನು ಅನುಸರಿಸುವ ಬಗ್ಗೆ.

ನಿರ್ಣಯ: ಚರ್ಚೆಯ ನಂತರ ದಿನಾಂಕ:23/07/2019ರಂದು ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನರುಗಳ ಸಭೆಯಲ್ಲಿ ನಿರ್ಧರಿಸಿದಂತೆ, 2019–20ನೇ ಸಾಲಿಗೆ ಪಿ.ಹೆಚ್.ಡಿ. ಪ್ರವೇಶಕ್ಕೆ ನೊಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಪ್ರವೇಶ ಪರೀಕ್ಷೆ ನಡೆಸಲು ಕೆ–ಸೆಟ್ (K-SET) ಮತ್ತು ಗೇಟ್(GATE) ಪರೀಕ್ಷೆಗಳಿಗೆ ಅನುಸರಿಸುತ್ತಿರುವ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

<u>ವಿಷಯ ಸೂಚಿ: 7:</u> 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಪರಿಶೀಲಿಸಿ ಅನುಮೋದಿಸುವ ಬಗೆಗೆ.

<u>ನಿರ್ಣಯ:</u> 2018–19ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯು ಅನುಮೋದಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ಸೆಕ್ಷನ್ 47(2)ರ ಅನುಸಾರ ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಶಿಫಾರಸ್ಸು ಮಾಡಿತು.

ಕುಲಸಚಿವರು (ಮೌಲ್ಯಮಾಪನ) ರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಕುಲಸಚಿವರು 21/10/2019

ಸಹಿ/–
ಕುಲಪತಿಯವರು